ಈ) ಸಂಪನ್ಮೂಲ ಸಂಗ್ರಹಣೆಯನ್ನಾಧರಿಸಿ ಹೆಚ್ಚಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

845(1455) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳಲ್ಲಿ 220 ಕೆವಿ. 110 ಕೆವಿ. ಹಾಗೂ 33 ಕೆವಿ. ಸ್ಟೇಷನ್‌ಗಳು ಈಗಾಗಲೇ ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ

ಆ) ಈ ತಾಲ್ಲೂಕುಗಳ ಯಾವ ಯಾವ ಕಡೆಗಳಲ್ಲಿ ಹೊಸದಾಗಿ 110 ಕೆ.ವಿ. ಹಾಗೂ 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆ:

ಇ) ಮಂಜೂರಾಗಿರುವಂತಹ ಈ ಕಾಮಗಾರಿಗಳು ಯಾವ ಹಂತದ ಪ್ರಗತಿಯಲ್ಲಿವೆ;

ಈ) ಸದರಿ ತಾಲ್ಲೂಕುಗಳಲ್ಲಿ ಯಾವ ಕಡೆಗಳಲ್ಲಿ ಹೊಸದಾಗಿ 110 ಕೆ.ವಿ ಮತ್ತು 33 ಕೆ.ವಿ ಸ್ಟೇಷನ್‌ಗಳನ್ನು ಮಂಜೂರು ಮಾಡಲು ಪ್ರಸ್ತಾವನೆಗಳು ಸರ್ಕಾರದ ಮುಂದಿರುತ್ತವೆ.

ಉ) ಅವುಗಳ ಮಂಜೂರಾತಿಗಾಗಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಿಜಾಪುರ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 220 ಕೆ.ವಿ. 110 ಕೆ.ವಿ. ಮತ್ತು 33 ಕೆ.ವಿ. ಸ್ಟೇಷನ್‌ಗಳ ವಿವರಗಳು ಈ ಕೆಳಗಿನಂತಿವೆ

1) ಬಿಜಾಪುರ ತಾಲ್ಲೂಕು:

220 ಕೆವಿ.	ಇರುವುದಿಲ್ಲ
110 ಕೆವಿ.	1. ಬಿಜಾಪುರ ನಗರ
	2. ಕೈಗಾರಿಕಾ ಪ್ರದೇಶ, ಬಿಜಾಪುರ
	3. ಮಮದಾಪುರ
33 ಕೆವಿ.	1. ತಿಕೋಟಾ
	2. ಬಬಲೇಶ್ವರ
	3. ಬೂತನಾಳ
	4 ತಿಡಗುಂದಿ
	5. ದೇವರಗೆನ್ನೂರ

2) ಬಸವನಬಾಗೇವಾಡಿ ತಾಲ್ಲೂಕು:

220 ಕೆವಿ.	ಬಸವನ ಬಾಗೇವಾಡಿ
110 ಕೆವಿ.	ನಿಡಗುಂದಿ
33 ಕೆವಿ.	ಮಲಘಾಣ

ಆ) ಬಿಜಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾಗಿರುವ 110 ಕೆ.ವಿ. ಸ್ಟೇಷನ್‌ಗಳು.

1. ತಿಕೋಟಾ.

2. ಶಿರಬೂರು.

ಬಿಜಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾಗಿರುವ 33 ಕೆ.ವಿ. ಸ್ಟೇಷನ್‌ಗಳು.

1. ಹೊನ್ನುಟಗಿ
2. ಬಿಜ್ಜರಗಿ.

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾಗಿರುವ 110 ಕೆ.ವಿ. ಸ್ಟೇಷನ್‌ಗಳು.

1. ಮಟ್ಟಿಹಾಳ.

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾಗಿರುವ 33 ಕೆ. ವಿ. ಸ್ಟೇಷನ್‌ಗಳು:

1. ಮನಗೂಳಿ.
2. ಹೂವಿನ ಹಿಪ್ಪರ್ಗಿ.
3. ಮುತ್ತಗಿ.

ಇ) **ಈ ಕಾಮಗಾರಿಗಳ ಪ್ರಗತಿಯ ಹಂತದ ವಿವರಗಳು ಈ ಕೆಳಕಂಡಂತಿವೆ:**

1) ಬಿಜಾಪುರ ತಾಲ್ಲೂಕು:

1) ತಿಕೋಟಾ 110 ಕೆ.ವಿ.	ಕಾಮಗಾರಿ ಮುಗಿದಿದೆ. ರೈಲ್ವೆ ಕ್ರಾಸಿಂಗ್ ಮಂಜೂರಾತಿ ಬಂದ ನಂತರ ಚಾಲನೆಗೊಳಿಸಲಾಗುವುದು.
2) ಶಿರಬೂರು 110 ಕೆ.ವಿ.	ಕಾಮಗಾರಿಯು ಪ್ರಗತಿಯಲ್ಲಿದ್ದು ಮಾರ್ಚ್ 2005 ರಲ್ಲಿ ಮುಗಿಸಲು ಕಾರ್ಯ ಯೋಜನೆ ಹಾಕಿಕೊಳ್ಳಲಾಗಿದೆ.
3) ಹೊನ್ನುಟಗಿ 33 ಕೆ.ವಿ.	ಕಾಮಗಾರಿಯು ಪ್ರಗತಿಯಲ್ಲಿದ್ದು, ಏಪ್ರಿಲ್ 2005 ರಲ್ಲಿ ಮುಗಿಸಲು ಕಾರ್ಯ ಯೋಜನೆ ಹಾಕಿಕೊಳ್ಳಲಾಗಿದೆ.
4) ಬಿಜ್ಜರಗಿ 33 ಕೆ.ವಿ.	ಕಾಮಗಾರಿಯು ಪ್ರಗತಿಯಲ್ಲಿದ್ದು, ಮೇ 2005 ರಲ್ಲಿ ಮುಗಿಸಲು ಕಾರ್ಯ ಯೋಜನೆ ಹಾಕಿಕೊಳ್ಳಲಾಗಿದೆ.

ಬಸವನಬಾಗೇವಾಡಿ ತಾಲ್ಲೂಕು:

1) ಮಟ್ಟಿಹಾಳ 110 ಕೆವಿ	ಯೋಜನಾ ವರದಿ ಸಿದ್ಧವಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಾರಂಭಿಸ ಬೇಕಾಗಿರುತ್ತದೆ.
2) ಮನಗೂಳಿ 33 ಕೆವಿ	ಕಾಮಗಾರಿಯು ಪ್ರಗತಿಯಲ್ಲಿದ್ದು, ಮಾರ್ಚ್ 2005 ರಲ್ಲಿ ಮುಗಿಸಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.
3) ಹೂವಿನ ಹಿಪ್ಪರಗಿ 33 ಕೆವಿ	ಕಾಮಗಾರಿಯು ಪ್ರಗತಿಯಲ್ಲಿದ್ದು, ಮಾರ್ಚ್ 2005ರಲ್ಲಿ ಮುಗಿಸಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

4) ಮುತ್ತಗಿ 33 ಕೆವಿ	ಕಾಮಗಾರಿಯು ಪ್ರಗತಿಯಲ್ಲಿದ್ದು, ಮೇ 2005ರಲ್ಲಿ ಮುಗಿಸಲು ಕಾರ್ಯಯೋಜನೆ ಹಾಕಿಕೊಳ್ಳಲಾಗಿದೆ.

ಈ) ಹೊಸದಾಗಿ 110 ಕೆ.ವಿ. ಮತ್ತು 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲು ಬಂದಿರುವ ಪ್ರಸ್ತಾವನೆಗಳ ವಿವರಗಳು:

ಬಿಜಾಪುರ ತಾಲ್ಲೂಕು:

110 ಕೆ.ವಿ	ಆಲ್–ಅಮೀನ್, ಬಿಜಾಪುರ.
33 ಕೆ.ವಿ.	1. ಖತಿಜಾಪುರ
	2. ನಾಗಠಾಣ

ಬಸವನ ಬಾಗೇವಾಡಿ ತಾಲ್ಲೂಕು:

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಸದ್ಯಕ್ಕೆ ಯಾವುದೇ ಹೊಸ 110 ಕೆವಿ ಅಥವಾ 33 ಕೆವಿ. ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಮಂಜೂರಾತಿಗಾಗಿ ತೆಗೆದುಕೊಂಡ ಕ್ರಮಗಳ ವಿವರಗಳು:

ಬಿಜಾಪುರ ತಾಲ್ಲೂಕು:

1) ಆಲ್–ಅಮೀನ್, ಬಿಜಾಪುರ 110 ಕೆ.ವಿ.	ಈ ಪ್ರಸ್ತಾವನೆಗೆ ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. 2006–07ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.
2) ಖತಿಜಾಪುರ, 33 ಕೆ.ವಿ.	ಯೋಜನಾ ವರದಿಯನ್ನು ತಯಾರಿಸಬೇಕಾಗಿದೆ. 2005–06 ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.
3) ನಾಗಠಾಣ, 33 ಕೆ.ವಿ.	2006–07ನೇ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ.

846(1456) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯರಗಟ್ಟಿ–ಮುಧೋಳ–ಮಂಟೂರ–ಚಿಕ್ಕಗಲಗಲಿ–ಬಬಲೇಶ್ವರ ರಾಜ್ಯ ಹೆದ್ದಾರಿ ನಂ.55ರ ಭಾಗವಾದ ಚಿಕ್ಕಗಲಗಲಿ–ಬಬಲೇಶ್ವರ ವರೆಗೆ 32.12 ಕಿ.ಮೀ. ರಸ್ತೆಯು ಸಂಪೂರ್ಣ ಹದಗೆಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಮುಖ್ಯ ರಸ್ತೆಯಾಗಿರುವ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;